ದಿಃ 23.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಕೆ.ಎಂ.ಪಿ., ವಕೀಲರಿಂದ ಪ್ರತಿವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 06.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ.ಎಂ.ಪಿ., ವಕೀಲರಿಂದ ಪ್ರತಿವಾದಿ ಪರವಾಗಿ

2. ಸಾಗುವಳಿ ಚೀಟಿಯ ಜೆರಾಕ್ಸ್ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಡಿ.1 ಎಂದು, ಸರ್ವೆ ನಂಬರ್ 17 ರ ಸ್ಕೆಚ್ ನ ಜೆರಾಕ್ಸ್ ದೃಢೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಡಿ.2 ಎಂದು, ಕಂದಾಯ ಪಾವತಿಯ ರಸೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿ.ಡಿ.3 ಎಂದು, 3 ಆರ್ ಟಿ.ಸಿ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿ.ಡಿ.4 ರಿಂದ 6 ಎಂದು, ಗಣಕೀಕೃತ ಮ್ಯುಟೇಷನ್ ರಿಜಿಸ್ಟರ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿ.ಡಿ.7 ಎಂದು, ಪಟ್ಟಾ ಪುಸ್ತಕವನ್ನು ಹಾಜರು ಪಡಿಸಿದ್ದು ಅದನ್ನು ನಿ.ಡಿ.8 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ

3. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು .

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 19.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಶ್ರೀಮತಿ ಕೆ.ಎಸ್.ಅರ್ಪಿತಾ ವಕೀಲರಿಂದ ವಾದಿ ಪರವಾಗಿ</u>

4. ನನ್ನ ಗಂಡನನ್ನು ಅಪ್ಪಯ್ಯಚಾರ್ ಮತ್ತು ಅಪ್ಪಣ್ಣ ಎಂಬ 2 ಹೆಸರಿನಿಂದ ಕರೆಯುತ್ತಿದ್ದರು ಎಂದರೆ ಸಾಕ್ಷಿ ನನ್ನ ಗಂಡನನ್ನು ಅಪ್ಪಯ್ಯಚಾರ್ ಎಂದು ಮಾತ್ರ ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ಸರ್ಕಾರದಿಂದ 15 ಗುಂಟೆ ಜಮೀನು ಮಂಜೂರಾಗಿತ್ತು ಎಂದರೆ ಸಾಕ್ಷಿ ಆ ಜಮೀನು ನನ್ನ ಗಂಡ ಖರೀದಿಸಿದ್ದರು ಎಂದು ನುಡಿಯುತ್ತಾರೆ. ಸದರಿ 15 ಗುಂಟೆ ಜಾಗ ಜನ್ನಾಪುರದ ಚಿನ್ನಿಗ ಗ್ರಾಮದಲ್ಲಿ ಇದೆ ಎಂದರೆ ಸರಿ. 2 ರಿಂದ 4 ನೇ ಪ್ರತಿವಾದಿಗಳು ನನ್ನ ಮಕ್ಕಳು ಎಂದರೆ ಸರಿ. ನನ್ನ ಗಂಡ ಅಪ್ಪಯ್ಯಚಾರ್ 2012 ರಲ್ಲಿ ಮೃತಪಟ್ಟರು ಎಂದರೆ ಸರಿ. ನನ್ನ ಗಂಡ ಮೃತಪಟ್ಟ ಬಳಿಕ 15 ಗುಂಟೆ ಜಾಗ ನನ್ನ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ಸದರಿ ಜಾಗ ಈಗಲು ನನ್ನ ಹೆಸರಿನಲ್ಲಿ ಖಾತೆ ಇದೆ.

5. 1 ನೇ ವಾದಿ ಆಶಾ ರವರ ತಂದೆಯ ಹೆಸರು ಪೌಲ್ ಡಿಸೋಜಾ ಎಂದರೆ ಸರಿ. ಪೌಲ್ ಡಿಸೋಜಾ ರವರು ಚಿನ್ನಿಗ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ. ನಾವು ಸಹ ಚಿನ್ನಿಗ ಗ್ರಾಮದ ವಾಸಿಗಳು ಎಂದರೆ ಸರಿ. ನನ್ನ ಗಂಡ ಸಹ ಚಿನ್ನಿಗ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ. ನನ್ನ ಗಂಡ ಮರಗೆಲಸ ಮಾಡುತ್ತಿದ್ದರು. ಜನ್ನಾಪುರದವರು ನನಗೆ ಹೆಚ್ಚಿನವರು ಪರಿಚಯ ಇದ್ದಾರೆ ಎಂದರೆ ಸರಿ. ಪೌಲ್ ಡಿಸೋಜಾ ರವರು ನನಗೆ ಪರಿಚಯ ಇದ್ದಾರೆ ಎಂದರೆ ಸರಿ. ಪೌಲ್ ಡಿಸೋಜಾ ರವರು ಯಾವ ಉದ್ಯೋಗ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಪೌಲ್ ಡಿಸೋಜಾ ರವರ ಮಕ್ಕಳೇ ಈ ದಾವೆಯನ್ನು ತಂದಿದ್ದಾರೆ ಎಂದರೆ ಅವರ ಮಕ್ಕಳನ್ನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

6. ನನ್ನ ಗಂಡ ಮರಣ ಹೊಂದಿದ ಬಳಿಕ 2017 ರಲ್ಲಿ ವಕೀಲರಿಂದ ನನಗೆ ನೋಟಿಸು ಬಂದಿತ್ತು ಎಂದರೆ ಸರಿ. ಸದರಿ ನೋಟೀಸಿಗೆ ನಾನು ಪ್ರತ್ಯುತ್ತರ

ನೋಟೀಸನ್ನು ವಕೀಲರ ಮೂಲಕ ಕಳುಹಿಸಲಿಲ್ಲ ಎಂದರೆ ಸರಿ. ನಿಮ್ಮ ಗಂಡನಿಗೆ ಮಂಜೂರಾದ ಜಾಗವನ್ನು ಪೋಡು ಮಾಡಿಸಲಾಗಿದೆ ಎಂದರೆ ಸಾಕ್ಷಿ ನಾನು ಇತ್ತೀಚೆಗೆ ಪೋಡು ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ. ವಾದಿಯರು ಯಾವ ಜಾಗಕ್ಕೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದ ಪತ್ರವನ್ನು ನಾನು ಓದಿ ನೋಡಿಲ್ಲ ಎಂದರೆ ಸರಿ.

7. ನಾನು 7 ನೇ ತರಗತಿ ವರೆಗೆ ಕಲಿತಿದ್ದೇನೆ. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನನ್ನ ಗಂಡ ಎಲ್ಲಿಯವರೆಗೆ ಕಲಿತಿದ್ದರು ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಬಿ.ಎ ವರೆಗೂ ಕಲಿತಿದ್ದಾರೆ. 2 ನೇ ಪ್ರತಿವಾದಿ ಪಿ.ಯು.ಸಿ ವರೆಗೂ ಕಲಿತಿದ್ದಾರೆ. 4 ನೇ ಪ್ರತಿವಾದಿ 10 ನೇ ತರಗತಿ ಕಲಿತಿದ್ದಾರೆ. ಪೌಲ್ ಡಿಸೋಜಾ ರವರು ದಿಃ 09.04.2025 ರಂದು ತೀರಿಕೊಂಡಿದ್ದರು ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ